# ಶ್ರೀ ಸುರೇಂದ್ರ ತೀರ್ಥರು – (ರಾಯರ ಮಠ)



ಶ್ರೀಸುರೇಂದ್ರ ತೀರ್ಥರು, ಮಧುರೈ
1504-1575

**shrI surEndratIrtharu (madhurai)**

yashchakaarOpavaasEna trivaaraM bhUpradakShiNaM |
tasmai namO yatIMdraaya shrI surEMdratapasvinE ||

ಯಶ್ಚಕಾರೋಪವಾಸೇನ ತ್ರಿವಾರಂ ಭೂಪ್ರದಕ್ಷಿಣಂ ।
ತಸ್ಮೈ ನಮೋ ಯತೀಂದ್ರಾಯ ಶ್ರೀ ಸುರೇಂದ್ರತಪಸ್ವಿನೇ ॥

यश्चकारोपवासेन त्रिवारं भूप्रदक्षिणं ।
तस्मै नमो यतींद्राय श्री सुरेंद्रतपस्विने ॥

## Aradhana Day : Pushya Shudda Dwadashi

*ಆರಾಧನಾ ದಿನ : ಪುಷ್ಯ ಶುಕ್ಲ ದ್ವಾದಶಿ*

ಕಾಲ Period - **1504- 1575**

Poorvashrama name – Sri Venkata Krishnaachaarya

ಪೂರ್ವಾಶ್ರಮನಾಮ – ಶ್ರೀ ವೆಂಕಟಕೃಷ್ಣಾಚಾರ್ಯ

ಆಶ್ರಮ ಗುರುಗಳು – ಶ್ರೀ ರಘುನಂದನತೀರ್ಥರು

ಶಿಷ್ಯರು – ಶ್ರೀ ವಿಜಯೀಂದ್ರತೀರ್ಥರು
– ಶ್ರೀ ಸುಧೀಂದ್ರತೀರ್ಥರು

ಸಮಕಾಲೀನರು – ಶ್ರೀವ್ಯಾಸರಾಜರು, ಶ್ರೀಪಾದರಾಜರು

ಒಮ್ಮೆ ಶ್ರೀವ್ಯಾಸರಾಜರ ಪೂಜೆಗೆ ಅವರ ಶಿಷ್ಯರು ತುಳಸಿಯನ್ನು ತಂದಾಗ, ಅದನ್ನು ಶ್ರೀ ವ್ಯಾಸರಾಜರು ನಿರ್ಮಾಲ್ಯವೆಂದು ಅದು ಪೂಜೆಗೆ ಬರುವುದಿಲ್ಲವೆಂದೂ ಹೇಳಿದರು. ಆಗ ಅವರ ಶಿಷ್ಯರು "ನಾವು ಇದನ್ನು ನೇರವಾಗಿ ತುಳಸೀವನದಿಂದ ಕಿತ್ತುತಂದದ್ದು" ಎಂದಾಗ, ಶ್ರೀವ್ಯಾಸರಾಜರು, ತಮ್ಮ ದಿವ್ಯಜ್ಞಾನದಿಂದ ನೋಡಿದಾಗ ಸುರೇಂದ್ರತೀರ್ಥರು ಇಡೀ ತುಳಸೀವನವನ್ನೇ ರಾಮದೇವರಿಗೆ ಸಮರ್ಪಿಸಿದ್ದಾರೆ ಎಂದು ಅರಿವಾಯಿತು.

ಶ್ರೀವ್ಯಾಸರಾಜರಿಂದ ಶಿಷ್ಯ ಸ್ವೀಕಾರ –

ಒಮ್ಮೆ ಶ್ರೀಸುರೇಂದ್ರತೀರ್ಥರು ಶ್ರೀವ್ಯಾಸರಾಜರ ಆಹ್ವಾನದಂತೆ ಅಲ್ಲಿಗೆ ಪೂಜೆಗೆ ಬಂದಾಗ ಅಲ್ಲೇ ಇದ್ದ ವ್ಯಾಸರಾಜರ ಶಿಷ್ಯ 'ವಿಷ್ಣುತೀರ್ಥ'ರನ್ನು ನೋಡಿ ಇವರನ್ನು ತಮ್ಮ ಸಂಸ್ಥಾನಕ್ಕೆ ಉತ್ತರಾಧಿಕಾರಿಯಾಗಿ ನೀಡಿರೆಂದು ಕೇಳಿದಾಗ ಸಂತೋಷದಿಂದ ಅವರಿಗೆ ಒಪ್ಪಿಸಿದರು. ಮುಂದೆ ಅವರೇ "ಶ್ರೀವಿಜಯೀಂದ್ರತೀರ್ಥ"ರೆಂದು ಪ್ರಖ್ಯಾತರಾದರು.

ಶ್ರೀ ಸುಧೀಂದ್ರತೀರ್ಥರಿಗೆ ಆಶ್ರಮಪ್ರದಾನ –

ಶ್ರೀ ಸುರೇಂದ್ರರು ಶ್ರೀವ್ಯಾಸರಾಜರಿಂದ ಸ್ವೀಕರಿಸಿದ ತಮ್ಮ ಉತ್ತರಾಧಿಕಾರಿಯಾಗಿ ಶ್ರೀ ವಿಜಯೀಂದ್ರತೀರ್ಥರನ್ನು ನೇಮಿಸಿದರು. ಆದರೆ ಶ್ರೀ ವಿಜಯೀಂದ್ರತೀರ್ಥರು, ಶ್ರೀಮಠದಲ್ಲಿ ನೇರವಾಗಿ ಆಶ್ರಮ ಸ್ವೀಕರಿಸಿಲ್ಲದಿದ್ದರಿಂದ, ಶ್ರೀಮಠದ ಪರಂಪರೆಗೆ ಚ್ಯುತಿ ಬರುವುದನ್ನು ತಡೆಯಲು ತಮ್ಮ ಗುರುಗಳನ್ನು ಮತ್ತೊಬ್ಬ ಶಿಷ್ಯನಿಗೆ ಆಶ್ರಮ ನೀಡುವಂತೆ ಕೋರಿದರು. ಅದರಂತೆ ಶ್ರೀ ಸುಧೀಂದ್ರರಿಗೆ ಶ್ರೀ ಸುರೇಂದ್ರರು ಆಶ್ರಮ ನೀಡಿ, ಅವರನ್ನು ಶ್ರೀ ವಿಜಯೀಂದ್ರತೀರ್ಥರ ನಂತರ ತಮ್ಮ ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು.

ಸಂಗ್ರಹ – ನರಹರಿಸುಮಧ್ವ